ಸುಪ್ತವಾಗಿಯೂ ಸದಾ ಆತಂಕ, ಅನಿಶ್ಚಿತತೆಯಲ್ಲೇ ಇರುವ ಮನಸ್ಸಿಗೆ ನಕಾರಾತ್ಮಕ ಸಂಗತಿಗಳನ್ನು ನಂಬುವಂತೆ ಮಾಡುವುದು ಕಷ್ಟಸಾಧ್ಯವಲ್ಲ. ಕೆಲವು ಸನ್ನಿಗಳು ನಿರುದ್ದೇಶವಾಗಿ ಹಬ್ಬಿದರೆ ಇನ್ನು ಹಲವನ್ನು ಉದ್ದೇಶಪೂರ್ವಕವಾಗಿಯೇ ಸಮಾಜದಲ್ಲಿ ಹರಡಲಾಗುತ್ತದೆ. ಈ ಉದ್ದೇಶಪೂರ್ವಕ ಸನ್ನಿಯ ಹಿಂದೆ ಯಾವುದೋ ವಿಕ್ಷಿಪ್ತ ಮನಸ್ಸು, ವಿಚ್ಛಿದ್ರ ಶಕ್ತಿಯಿರಬಹುದು ಅಥವಾ ರಾಜಕೀಯ ನಾಯಕರೇ ಇರಬುಹುದು. ಆಯಾ ಕಾಲಕ್ಕೆ, ಆಯಾ ಪ್ರದೇಶದಲ್ಲಿ ಇವರೆಲ್ಲರೂ ಮನುಷ್ಯನ ಈ ದುರ್ಬಲತೆಯನ್ನು ತಮ್ಮನುಕೂಲಕ್ಕೆ ಬಳಸಿಕೊಂಡಿದ್ದಾರೆ. ಇವತ್ತಿಗೆ ಲಭ್ಯವಿರುವ ತಂತ್ರಜ್ಞಾನ ಅವರ ಕೆಲಸವನ್ನು ಮತ್ತೂ ಸಲೀಸಾಗಿಸಿದೆ.

ಇವೆಲ್ಲವುಗಳಿಗಿಂತ ವಿಭಿನ್ನವೆನಿಸುವ ಪ್ರಸಂಗವೊಂದನ್ನು ಪ್ರಸ್ತಾಪಿಸುತ್ತಿರುವೆ. ನನ್ನ ಚೀನಾ ಪ್ರವಾಸದಲ್ಲೊಮ್ಮೆ ಶೌಚಗೃಹ ಪರಿಕರಗಳ (ನಲ್ಲಿ, ಶವರ್ ಮಿಕ್ಸರ್ ಇತ್ಯಾದಿ) ಕಾರ್ಖಾನೆಯೊಂದಕ್ಕೆ ಭೇಟಿ ನೀಡಿದ್ದೆ. ಅಲ್ಲಿಯ ಕಾರ್ಮಿಕರು ಕೆಲಸ ಮಾಡುವ ಶೈಲಿ ನನ್ನನ್ನು ನಿಜಕ್ಕೂ ಚಕಿತನನ್ನಾಗಿಸಿತ್ತು. ಪ್ಯಾಕಿಂಗ್ ವಿಭಾಗದಲ್ಲಿ– ಟೇಬಲ್ಲೊಂದರ ಎದುರುಬದರು ಐವತ್ತಕ್ಕೂ ಹೆಚ್ಚು ಕೆಲಸಗಾರರು ಸಾಲಾಗಿ ನಿಂತು, ತಮ್ಮೆದುರು ಬರುತ್ತಿರುವ ವಸ್ತುಗಳನ್ನು ಪ್ಯಾಕ್ ಮಾಡುತ್ತಿದ್ದರು. ತಲೆ ಎತ್ತದೆ, ತಮ್ಮ ಕೈಗಳಿಗೆ ನಿಮಿಷದ ಬಿಡುವನ್ನೂ ನೀಡದೇ, ಏಕರೀತಿಯಾಗಿ ಕಾರ್ಯನಿರತರಾಗಿದ್ದ ಅವರನ್ನು ನೋಡಿದರೆ, ಯಂತ್ರಗಳ ಸಾಲು ಕೆಲಸ ಮಾಡುತ್ತಿರುವಂತೆ ಗೋಚರಿಸುತ್ತಿತ್ತು. ಸಮೂಹ ನೃತ್ಯದಲ್ಲಿ ಕಾಣಿಸುವಂತೆ, ಎಲ್ಲರ ಕೈ ಒಂದೇ ಸಮಯಕ್ಕೆ ಒಂದೇ ತೆರನಾಗಿ ಚಲಿಸುತ್ತಿತ್ತು. ಆ ಕ್ಷಣಕ್ಕೆ ಇದೂ ಒಂದು ರೀತಿಯ ಸನ್ನಿಯೇ ಎಂದೆನಿಸಿಬಿಟ್ಟಿತು ನನಗೆ. ಆ ಕಾರ್ಮಿಕರ ಈ ಅತಿ ಶಿಸ್ತಿನ ವರ್ತನೆಯ ಹಿಂದಿನ ಕಾರಣ ತಿಳಿಯದ್ದೇನೂ ಅಲ್ಲ. ಅಲ್ಲಿ ಹಲವು ಬಗೆಯ ಒತ್ತಡಗಳು ಕೆಲಸ ಮಾಡುತ್ತಿರುತ್ತವೆ. ಆ ಒತ್ತಡವೇ ತನ್ನ ಪಕ್ಕದಲ್ಲಿರುವವನ ಕರ ಚಲನೆಯ ಶೈಲಿಯಲ್ಲೇ, ಆತ ಕೆಲಸ ಮಾಡುತ್ತಿರುವ ವೇಗದಲ್ಲೇ, ತಾನೂ ಮಾಡುವಂತೆ ಪ್ರತಿಯೊಬ್ಬನನ್ನೂ ಪ್ರೇರೇಪಿಸುತ್ತಿದೆಯೇ? ಇದೂ ಒಂದು ರೂಪದ 'ಇಂಪೋಸ್ಡ್' ಸನ್ನಿಯೆಂಬುದು ನಿಜವಾದರೆ, ಈ ಮುಖೇನ ಸಣ್ಣ ಗುಂಪೊಂದನ್ನು ತನ್ನ ಆಣತಿಯ ಅಡಿಯಲ್ಲೇ ನಡೆಸಬಹುದೆಂದಾದರೆ, ಚೀನಾದಂತಹ ರಾಷ್ಟ್ರ ದೇಶದ ಜನತೆಯನ್ನು ಇಂತಹುದೇ ಹಲವು ಸ್ವರೂಪದ ಸನ್ನಿಗೊಳಪಡಿಸಿ ತನ್ನ ಅಂಕೆಯಲ್ಲಿಟ್ಟುಕೊಳ್ಳಲು ಸಾಧ್ಯವಾಗಿರಬಹುದಲ್ಲವೇ?

ನನ್ನ ಕಚೇರಿಯ ಟ್ರೇನಿಂಗಿನಲ್ಲಿ ಉದಾಹರಿಸಲಾದ ಸಮೂಹ ಚಿಂತನೆಯದು ಒಂದು ಬಗೆಯದಾದರೆ, ಇಡೀ ದೇಶಕ್ಕೆ ಹರಡಬಹುದಾದ ಸನ್ನಿ ಮತ್ತೊಂದು ರೀತಿಯದು. ಪ್ರತಿಯೊಂದಕ್ಕೂ ಅದರದೇ ಆದ ಕಾಲಘಟ್ಟ, ಅವಧಿ, ಭೌಗೋಳಿಕ ಗಡಿ, ಸಾಮಾಜಿಕ ಹಿನ್ನೆಲೆ, ಸಂಖ್ಯಾ ಮಿತಿ ಇರುತ್ತವಷ್ಟೇ? ಆದರೆ, ಇವೆಲ್ಲವನ್ನೂ ಮೀರಿದ, ಎಲ್ಲ ಕಾಲಕ್ಕೂ ಎಲ್ಲಾ ದೇಶಕ್ಕೂ ಹೆಚ್ಚು ಕಮ್ಮಿ ಎಲ್ಲ ಸಮುದಾಯಕ್ಕೂ ಅನ್ವಯವಾಗುವ ಸನ್ನಿಯೆಂದರೆ ಅದು ಧರ್ಮವೇ ಇರಬಹುದೇ? ಇದನ್ನೇ ಬಳಸಿಕೊಂಡು ಅನೇಕ ದೇಶದ ಹಲವು ಮುಖಂಡರು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವುದಂತೂ ಸತ್ಯ. ಈ ರೀತಿ ಸಾಮೂಹಿಕ ಮನೋವೃತ್ತಿಯಿಂದ ಉಂಟಾಗುವ ಅಪಾಯದ ಅರಿವಿರುವ ಕಾರ್ಪೊರೇಟ್ ಸಂಸ್ಥೆಗಳು ಜಾಣ್ಮೆಯಿಂದ ಅದನ್ನು ಹತ್ತಿಕ್ಕುತ್ತವೆ. ಆದರೆ, ಅದಕ್ಕಿಂತಲೂ ವಿಸ್ತೃತ ರೂಪದ, ಸಮಾಜಕ್ಕೆ, ದೇಶಕ್ಕೆ ಮಾರಕವಾಗಬಹುದಾದ ಸಮೂಹ ಸನ್ನಿಯನ್ನು ಹತ್ತಿಕ್ಕುವ ಆಶಯ, ಬದ್ಧತೆ ಯಾರಿಗಿದೆ?

★★★

ದಾರಿಯುದ್ದಕ್ಕೂ ನನ್ನ ಮಾತುಗಳನ್ನು ಆಲಿಸುತ್ತಿದ್ದ (?) ಹೆಂಡತಿ ಕೊನೆಯಲ್ಲಿ – 'ಅದೆಲ್ಲಾ ಇರಲಿ. ಇಷ್ಟೆಲ್ಲಾ ಕೊರೆಯುವ, ನೀನ್ಯಾಕೆ ರಸ್ತೆ ಮಧ್ಯೆ ಕಾರು ನಿಲ್ಲಿಸಿ, ಸೇತುವೆಯಿಂದ ಬಗ್ಗಿ ನೋಡಲು ಹೋಗಿದ್ದು?' ಎನ್ನುವ ಪ್ರಶ್ನೆ ಎಸೆದಳು. ನಾನು ಉತ್ತರಕ್ಕಾಗಿ ತಡಕಾಡತೊಡಗಿದೆ.